ಕೊಡಗು ಜಿಲ್ಲೆಯಲ್ಲಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಪೂರೈಕೆಯ ಬಗ್ಗೆ

೭೭೧ (ಡಿ) ಶ್ರೀ ಡಿ. ಎ. ಚಿನ್ನಪ್ಪ. (ಮಡಿಕೇರಿ).— ಮಾನ್ಯ ವಾಣಿಜ್ಯ, ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೊಡಗಿನಲ್ಲಿ ೧೯೮೫–೮೬ ಮತ್ತು ೧೯೮೬–೮೭ನೇ ಸಾಲುಗಳಲ್ಲಿ ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕೆಂದು ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು ?

ಆ) ಆಪೈಕಿ ಎಷ್ಟು ಪಂಪ್‌ಸೆಟ್‌ಗಳಿಗೆ ವಿದ್ಯುತ್ತನ್ನು ಒದಗಿಸಲಾಗಿದೆ ?

ಇ) ಇನ್ನೂ ಎಷ್ಟು ಅರ್ಜಿಗಳು ಬಾಕಿ ಉಳಿದಿವೆ ಹಾಗೂ ಅವುಗಳ ವಿಲೇವಾರಿಯಲ್ಲಿ ವಿಳಂಬವುಂಟಾಗಿರುವುದಕ್ಕೆ ಕಾರಣವೇನು ?

ಈ) ಬಾಕಿ ಉಳಿದಿರುವ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಒದಗಿಸಲು ಇನ್ನೂ ಎಷ್ಟು ಸಮಯ ಬೇಕಾಗುತ್ತದೆ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ೧೯೮೫–೮೬ರಲ್ಲಿ ೨೩೦ ಅರ್ಜಿಗಳು ಮತ್ತು ೧೯೮೬–೮೭ರಲ್ಲಿ (೩೧–೧೦–೧೯೮೭ರವರೆಗೆ) ೨೧೭ ಅರ್ಜಿಗಳು ಬಂದಿದ್ದವು.

ಆ) ೧೯೮೫–೮೬ರಲ್ಲಿ ೧೧೦ ಮತ್ತು ೧೯೮೬–೮೭ರಲ್ಲಿ ೧೧೫ ಪಂಪುಸೆಟ್‌ಗಳಿಗೆ ವಿದ್ಯುತ್ ಪೂರೈಕೆ ಮಾಡಲಾಗಿದೆ.

ಇ) ೩೧–೧೦–೧೯೮೭ರಲ್ಲಿದ್ದಂತೆ ೨೦೪ ಅರ್ಜಿಗಳು ಉಳಿದಿವೆ. ಗುರಿಗಿಂತಲೂ ಅಧಿಕ ಸಂಖ್ಯೆಯಲ್ಲಿ ಅರ್ಜಿಗಳು ಬಂದಿದ್ದು, ಹಲವು ಅರ್ಜಿದಾರರು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ನಿಯಮಗಳನ್ನು ಪಾಲಿಸುವುದರಲ್ಲಿ ವಿಳಂಬ ಮಾಡಿರುವುದು ಕಾರಣಗಳಾಗಿವೆ.

ಈ) ಒಂದು ವರ್ಷಕ್ಕೂ ಹೆಚ್ಚು ಕಾಲಬೇಕು.

ಆನೆಗಳ ಹಾವಳಿಯನ್ನು ತಡೆಗಟ್ಟುವ ಬಗ್ಗೆ

೬೨೬. ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).— ಮಾನ್ಯ ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ರಾಜ್ಯದಲ್ಲಿ ಆನೆಗಳು ಬಾರದಂತೆ ಕಂದಕಗಳನ್ನು ತೆಗೆಯಲು ಖರ್ಚು ಮಾಡಲಾದ ಹಣ ಎಷ್ಟು ?

೨. ಇದರಿಂದ ಆನೆಗಳ ಹಾವಳಿಯನ್ನು ತಡೆಗಟ್ಟಲು ಸಾಧ್ಯವಾಗಿದೆಯೇ ?

೩. ಹಾಗಿಲ್ಲದಿದ್ದಲ್ಲಿ ಇದರಿಂದ ಬಡಜನರ ಜಾನುವಾರುಗಳು ಅರಣ್ಯದಲ್ಲಿ ಮೇಯಲು ತೊಡಕುಂಟಾಗುವುದಿಲ್ಲವೇ ?

೪. ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

೧) ೪೬,೬೭,೦೦೦–೦೦ ರೂಪಾಯಿಗಳು (೧೯೮೨–೮೩ರಿಂದ ಇಂದಿನವರೆಗೆ)

೨) ಕಂದಕಗಳನ್ನು ತೋಡಿಸಲಾಗಿರುವ ಪ್ರದೇಶಗಳಲ್ಲೆಲ್ಲಾ ಸಾಧ್ಯವಾಗಿದೆ, ಹೌದು.

೩) ಆನೆಗಳು ಅರಣ್ಯ ಪ್ರದೇಶದಿಂದ ಜಮೀನುಗಳಿಗೆ ದಾಟಿ ಬಂದು ಹಾವಳಿ ಮಾಡುವುದನ್ನು ತಡೆಗಟ್ಟಲು ಕಂದಕಗಳನ್ನು ತೋಡಿರುವುದರಿಂದ ಅದು ಸ್ವಾಭಾವಿಕವಾಗಿ ಆ ಸ್ಥಳಗಳಲ್ಲಿ ಜಾನುವಾರುಗಳು ಅರಣ್ಯ ಪ್ರದೇಶಕ್ಕೆ ಹೋಗುವುದನ್ನು ತಡೆಗಟ್ಟುತ್ತದೆ.

೪. ಆನೆಗಳು ವ್ಯವಸಾಯ ಜಮೀನುಗಳಿಗೆ ಬಂದು ಹಾಪಳಿ ಮಾಡದಿರುವಂತೆ ಆನೆ ತಡೆ ಕಂದಕಗಳನ್ನು ರಾಜ್ಯ ಅರಣ್ಯ ಗಡಿಗೆ ಹೊಂದಿಕೊಂಡಿರುವ ವ್ಯವಸಾಯ ಭೂಮಿ ಕಂಡುಬರುವ ಪ್ರದೇಶಗಳಲ್ಲಿ ಹಂತಹಂತವಾಗಿ ತೋಡಿಸಲಾಗಿದೆ ಇದರ ಜೊತೆಗೆ ಕಾಡು ಆನೆಗಳನ್ನು ಅರಣ್ಯಕ್ಕೆ ಓಡಿಸಲು ಸ್ಥಳೀಯ ಹಾಗೂ ಇಲಾಖಾ ಸಿಬ್ಬಂದಿಯವರಿಂದ ಕೂಡಿದ ತಂಡಗಳನ್ನು ನೇಮಿಸಲಾಗಿದೆ. ಇದಲ್ಲದೆ ಬೆಳೆ ನಷ್ಟಕ್ಕೆ (ಕಾಡು ಪ್ರಾಣಿಗಳಿಂದ ಹಾಗೂ ಆನೆಗಳಿಂದ) ಸೂಕ್ತ ಪರಿಹಾರವನ್ನು ಕೂಡ ವಂಜೂರು ಮಾಡಲಾಗುತ್ತಿದೆ.

ವಿದ್ಯುತ್ ಕೊರತೆಯನ್ನು ನಿವಾರಿಸುವ ಬಗ್ಗೆ

೬೬೮ (ಡಿ) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).— ಮಾನ್ಯ ವಾಣಿಜ್ಯ, ಕೈಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯವು ತೀವ್ರ ವಿದ್ಯುತ್ತಿನ ಕೊರತೆಯನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಕೊರತೆಯು ಪ್ರಮಾಣವೆಷ್ಟು ?

ಇ) ವಿದ್ಯುತ್ ಕೊರತೆಯಿಂದಾಗಿ ತೊಂದರೆಗೊಳಗಾಗುತ್ತಿರುವ ರೈತರ ಸಮಸ್ಯೆಯನ್ನು ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ?

ಈ) ಧಾರವಾಡ ಜಿಲ್ಲೆ ರೋಣ ತಾಲ್ಲೂಕಿನಲ್ಲಿ ವಿದ್ಯುತ್ ಪೂರೈಕೆಯನ್ನು ಸರಿಪಡಿಸಲು ಸರ್ಕಾರದವರು ಕೈಕೊಂಡ ಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ವಂತ್ರಿಗಳು).—

ಅ) ಬಂದಿದೆ.

ಆ) ೧೯೮೬–೮೭ರಲ್ಲಿ ೨೧೮೪ ದಶಲಕ್ಷ ಯೂನಿಟ್ಟುಗಳ ಕೊರತೆಯನ್ನು ಅಂದಾಜು ಮಾಡಿದೆ.

ಇ) ನೀರಾವರಿ ಪಂಪುಸೆಟ್ಟುಗಳಿಗೆ ಈಗ ವಿದ್ಯುತ್ ಕಡಿತದಿಂದ ವಿನಾಯಿತಿ ನೀಡಲಾಗಿದೆ.

ಈ) ನರೇಗಲ್ಲಿನಲ್ಲಿ ಈಗ ಇರುವ ೩೩ ಕೆವಿ ಕೇಂದ್ರವನ್ನು ೧೯೮೭–೮೮ರಲ್ಲಿ ೧೧೦ ಕೆವಿ ಕೇಂದ್ರವಾಗಿ ಪರಿವರ್ತಿಸುವ ಯೋಜನೆ ಇದೆ.

ಅರಣ್ಯ ಇಲಾಖೆ ನೌಕರರ ಮುಷ್ಕರದ ಬಗ್ಗೆ

೭೫೧. ಶ್ರೀ ಆರ್. ಎನ್. ನಾಯಕ್(ಭಟ್ಕಳ).— ಮಾನ್ಯ ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಅರಣ್ಯ ಖಾತೆಯಲ್ಲಿ ಕೆಲಸ ಮಾಡುವ ಆರ್.ಎಫ್.ಓ, ಹಾಗೂ ಅದಕ್ಕಿಂತ ಕೆಳದರ್ಜೆಯ ನೌಕರರು ಕಳೆದ ತಿಂಗಳು ಮುಷ್ಕರ ನಡೆಸಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಅವರ ಬೇಡಿಕೆ ಈಡೇರಿಸುವತ್ತ ಏನು ಕ್ರಮ ಕೈಗೊಳ್ಳಲಾಗಿದೆ.

ಇ) ಸಿಬ್ಬಂದಿಗಳು ಮುಷ್ಕರ ಮಾಡುತ್ತಿದ್ದಾಗ ಅರಣ್ಯ ರಕ್ಷಿಸಲು ಏನಾದರೂ ಪರ್ಯಾಯ ವ್ಯವಸ್ಥೆ ಮಾಡಲಾಗಿತ್ತೆ ?

ಈ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ?

ಶ್ರೀ ಜೆ. ಎಸ್, ದೇಶ್‌ಮುಖ್ (ಗಣಿ ಮತ್ತು ಭೂವಿಜ್ಞಾನ, ಅರಣ್ಯ ಸಚಿವರು).—

ಅ) ಹೌದು. ರಾಜ್ಯದ ಅರಣ್ಯ ಖಾತೆಯಲ್ಲಿ ಕೆಲಸ ಮಾಡುವ ಆರ್.ಎಫ್.ಓ ಹಾಗೂ ಅದಕ್ಕಿಂತ ಕೆಳದರ್ಜೆಯ ನೌಕರರು ಕಳೆದ ತಿಂಗಳು (೨೫–೧೨–೮೬ರಿಂದ ೪–೧–೮೭ರವರೆಗೆ) ಮುಷ್ಕರ ನಡೆಸಿದ್ದು ಸರ್ಕಾರದವರ ಗಮನಕ್ಕೆ ಬಂದಿದೆ.